# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 908 (954) |
| ಉತ್ತರಿಸುವ ದಿನಾಂಕ | 20-08-2025 |
| ಮಾನ್ಯ ಸದಸ್ಯರ ಹೆಸರು | ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ. (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದಲ್ಲಿ ಸಹಕಾರ ಸಂಘಗಳು, ಬ್ಯಾಂಕುಗಳು ಮತ್ತು ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಸಾರ್ವಜನಿಕರು ಪಡೆಯುವ ಸಾಲದ ಮುದ್ರಾಂಕ ಶುಲ್ಕ (ಸ್ಟ್ಯಾಂಪ್ ಡ್ಯೂಟಿ) ವನ್ನು ಭಾರಿ ಪ್ರಮಾಣದಲ್ಲಿ ಏರಿಕೆ ಮಾಡಿರುವುದರಿಂದ, ಮಧ್ಯಮ ಮತ್ತು ಕೆಳ ಮಧ್ಯಮ ವರ್ಗದ ಜನರಿಗೆ ಆರ್ಥಿಕವಾಗಿ ಸಾಕಷ್ಟು ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td rowspan="2">ಕರ್ನಾಟಕ ಮುದ್ರಾಂಕ ಕಾಯ್ದೆ 1957ರ ಷೆಡ್ಯೂಲ್ ನಲ್ಲಿರುವ ಆರ್ಟಿಕಲ್ ಸಂಖ್ಯೆ:6 ರಲ್ಲಿ Deposit of title deeds ದಸ್ತಾವೇಜುಗಳಿಗೆ ಸಂಬಂಧಿಸಿದಂತೆ ಈ ಕೆಳಕಂಡಂತೆ ನಿಗದಿಪಡಿಸಿದ ಮುದ್ರಾಂಕ ಶುಲ್ಕವನ್ನು ಸರ್ಕಾರದ ಅಧಿಸೂಚನೆ ಸಂಖ್ಯೆ:DPAL 39 SHASANA 2023 ದಿನಾಂಕ:03.02.2024 ರನ್ವಯ ಜಾರಿಗೆ ತಂದಿರುವ The Karnataka Stamp (Amendment) Act 2023 ರಲ್ಲಿ 0.5% ಕ್ಕೆ ಹೆಚ್ಚಿಸಲಾಗಿದೆ:<br><table><tr><th>ಕ್ರ. ಸಂ.</th><th>ಸಾಲದ ಮೊತ್ತ</th><th>ಚಾಲ್ತಿಯಲ್ಲಿರುವ ಮುದ್ರಾಂಕ ಶುಲ್ಕ (%)</th><th>ಪರಿಷ್ಕರಿಸಲಾಗಿರುವ ಮುದ್ರಾಂಕ ಶುಲ್ಕ (%)</th></tr><tr><td>1</td><td>10.00 ಲಕ್ಷದವರೆಗೆ</td><td>0.1</td><td rowspan="2">0.5</td></tr><tr><td>2</td><td>10.00 ಲಕ್ಷಕ್ಕೂ ಮೇಲ್ಪಟ್ಟು</td><td>0.2</td></tr></table><br>ಈ ರೀತಿ ಮುದ್ರಾಂಕ ಶುಲ್ಕವನ್ನು ಹೆಚ್ಚಿಸಿರುವುದಕ್ಕೆ ಸಾರ್ವಜನಿಕರಿಂದ ಯಾವುದೇ ಮನವಿ/ ದೂರುಗಳು ಇಲಾಖೆಯಲ್ಲಿ ಸ್ವೀಕೃತವಾಗಿರುವುದಿಲ್ಲ.</td></tr>
<tr><td>ಆ)</td><td>ಬಂದಿದ್ದಲ್ಲಿ, ಸಾರ್ವಜನಿಕರು ತಮ್ಮ ಸಂಕಷ್ಟಕ್ಕೆಂದು ಪಡೆಯುವ ಸಾಲದ ಮೇಲಿನ ಮುದ್ರಾಂಕ ಶುಲ್ಕವನ್ನು ಶೇಕಡ 150 ರಿಂದ 400 ಪಟ್ಟು ಹೆಚ್ಚಿಸಿರುವುದು ಗ್ರಾಹಕರಿಗೆ ಅಧಿಕ ಹೊರೆಯಾಗಿ ಪರಿಣಮಿಸಿರುವುದನ್ನು ಮನಗಂಡು ಅದನ್ನು ಪರಿಷ್ಕರಿಸಲು ಸರ್ಕಾರ ಇದುವರೆಗೆ ಯಾವುದೇ ಕ್ರಮ ವಹಿಸದಿರಲು ಕಾರಣಗಳೇನು;</td></tr>
<tr><td>ಇ)</td><td>ಸಾಲ ಮಾಡಿ ಕನಸಿನ ಸೂರು ಕಟ್ಟಿಕೊಳ್ಳುವ ಮಧ್ಯಮ ಮತ್ತು ಕೆಳ ಮಧ್ಯಮ ವರ್ಗದವರು ಮನೆಯಲ್ಲಿನ ಸಂಕಷ್ಟಕ್ಕೆ ಒಡವೆಗಳನ್ನು ಅಡಮಾನ ಮಾಡಿ ಸಾಲ ಪಡೆಯುವ ರೈತರು ಹಾಗೂ ಕೂಲಿ ಕಾರ್ಮಿಕರ ಪಾಲಿಗೆ ಭರಿಸಲು ಸಾಧ್ಯವಿಲ್ಲದಂತಹ ಹೊರೆಯಾಗಿರುವ ಈ ಮುದ್ರಾಂಕ ಶುಲ್ಕ ಏರಿಕೆಯನ್ನು ಯಾವ ಕಾಲಮಿತಿಯೊಳಗೆ, ಪರಿಷ್ಕರಿಸಿ ಗಣನೀಯವಾಗಿ ಕಡಿಮೆ ಮಾಡಲು ಅಗತ್ಯ ಕ್ರಮ ವಹಿಸಲಾಗುವುದು?</td><td>ಕರ್ನಾಟಕ ಮುದ್ರಾಂಕ ಕಾಯ್ದೆ ಷೆಡ್ಯೂಲ್‌ನಲ್ಲಿರುವ ಸಾಲದ ದಸ್ತಾವೇಜುಗಳಿಗೆ ಸಂಬಂಧಿಸಿದ ಆರ್ಟಿಕಲ್ 6ರಲ್ಲಿ ಬರುವ ದಸ್ತಾವೇಜುಗಳಿಗೆ ನಿಗದಿಪಡಿಸಲಾದ ಮುದ್ರಾಂಕ ಶುಲ್ಕವನ್ನು ಪರಿಷ್ಕರಿಸುವ ಪ್ರಸ್ತಾವನೆ ಇರುವುದಿಲ್ಲ.</td></tr>
</table>

ಕಂಇ/245/ಎಂಎನ್‌ಎಸ್‌ಎ/2025

(ಕೃಷ್ಣ ಬೈರೇಗೌಡ)
ಕಂದಾಯ ಸಚಿವರು